All India Radio: Bangalore
National Bulletin In Kannada
06.07.2026 19.35 hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಪ್ರಧಾನಿ ನರೇಂದ್ರ ಮೋದಿ ತ್ರಿರಾಷ್ಟ್ರ ಪ್ರವಾಸ ; ಮೊದಲನೇ ಚರಣದಲ್ಲಿ ಇಂಡೋನೇಷಿಯಾದ ಜಕಾರ್ತಾಗೆ ಭೇಟಿ
- ಕೇಂದ್ರ ಸಹಕಾರ ಸಚಿವಾಲಯಕ್ಕೆ ೫ ವರ್ಷ ; ಸುಧಾರಣೆ, ಡಿಜಿಟಲೀಕರಣದ ಮೂಲಕ ಹೊಸ ಹಂತ ಪ್ರವೇಶ - ಕೇಂದ್ರ ಸಚಿವ ಅಮಿತ್ ಶಾ
- ಗಡಿ ರಸ್ತೆ ಸಂಸ್ಥೆ ಬಿಆರ್‌ಓ ನಿಧಿ ದುರುಪಯೋಗ ಪ್ರಕರಣ: ೧೧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ೨೮ ಸ್ಥಳಗಳಲ್ಲಿ ಸಿಬಿಐ ದಾಳಿ
- ಫಿಫಾ ವಿಶ್ವಕಪ್ ಫುಟ್ಬಾಲ್; ಕ್ವಾರ್ಟರ್ ಫೈನಲ್ಸ್‌ಗೇರಲು ಇಂದು ರಾತ್ರಿ ಪೋರ್ಚುಗಲ್-ಸ್ಪೇನ್ ಸೆಣಸು

---

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ತ್ರಿರಾಷ್ಟ್ರ ಪ್ರವಾಸದ ಮೊದಲ ಚರಣದ ಭಾಗವಾಗಿ ಇಂದು ಇಂಡೋನೇಷ್ಯಾದ ಜಕಾರ್ತಕ್ಕೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಬರಮಾಡಿಕೊಂಡರು.

ಬಳಿಕ ಪ್ರಧಾನಿ, ರಾಮಾಯಣ ಆಧಾರಿತ ಇಂಡೋನೇಷ್ಯಾದ ಸಾಂಪ್ರದಾಯಿಕ 'ವಾಯಾಂಗ್ ಕುಲಿತ್' ಛಾಯಾ ಕರಕುಶಲ ಗೊಂಬೆಯಾಟದ ಪ್ರದರ್ಶನವನ್ನು ವೀಕ್ಷಿಸಿದರು.

ಪ್ರವಾಸದ ಅವಧಿಯಲ್ಲಿ ಪ್ರಧಾನಿ, ಇಂಡೋನೇಷ್ಯಾ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಉಭಯ ನಾಯಕರು ಐತಿಹಾಸಿಕ ನಗರ ಯೋಗ್ಯಕರ್ತಾಗೆ ಭೇಟಿ ನೀಡಲಿದ್ದು,

ಅಲ್ಲಿನ ಪ್ರಂಬನನ್ ದೇವಸ್ಥಾನ ಸಂಕೀರ್ಣಕ್ಕೆ ಭೇಟಿ ನೀಡಲಿದ್ದಾರೆ. ಅಲ್ಲಿ ಉಭಯ ದೇಶಗಳು ಜಂಟಿಯಾಗಿ ಸಂರಕ್ಷಣಾ ಕಾರ್ಯ ಕೈಗೊಳ್ಳಲಿವೆ.

ಪ್ರವಾಸದ ಎರಡನೇ ಚರಣದ ಭಾಗವಾಗಿ ಇದೇ ೮ ರಿಂದ ೧೦ ರವರೆಗೆ ಆಸ್ಟ್ರೇಲಿಯಾದ ಮೆಲ್ಬೋರ್ನ್‌ಗೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ, ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರೊಂದಿಗೆ ೩ನೇ ವಾರ್ಷಿಕ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಸೈಬರ್ ಭದ್ರತೆ, ನಿರ್ಣಾಯಕ ಖನಿಜಗಳು ಹಾಗೂ ಉದಯೋನ್ಮುಖ ತಂತ್ರಜ್ಞಾನಗಳ ಕುರಿತು ಚರ್ಚೆಗಳು ನಡೆಯಲಿವೆ.

ಪ್ರವಾಸದ ಕೊನೆಯ ಹಂತವಾಗಿ ಇದೇ ೧೦ ರಿಂದ ೧೧ ರವರೆಗೆ ಅವರು ನ್ಯೂಜಿಲೆಂಡ್‌ಗೆ ಭೇಟಿ ನೀಡಲಿದ್ದಾರೆ. ಕಳೆದ ೪೦ ವರ್ಷಗಳಲ್ಲಿ ಭಾರತದ ಪ್ರಧಾನಿಯೊಬ್ಬರು ಅಲ್ಲಿಗೆ ನೀಡುತ್ತಿರುವ ಮೊದಲ ಭೇಟಿ ಇದಾಗಿದ್ದು, ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರೊಂದಿಗೆ ವ್ಯಾಪಾರ ಮತ್ತು ರಕ್ಷಣಾ ವಲಯದ ದ್ವಿಪಕ್ಷೀಯ ಬಾಂಧವ್ಯದ ಕುರಿತು ಪ್ರಧಾನಿ ನರೇಂದ್ರ ಮೋದಿ ಮಾತುಕತೆ ನಡೆಸಲಿದ್ದಾರೆ.

---

ಭಾರತೀಯ ಜನ ಸಂಘದ ಸಂಸ್ಥಾಪಕ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ೧೨೫ನೇ ಜನ್ಮ ವಾರ್ಷಿಕೋತ್ಸವ ಪ್ರಯುಕ್ತ ಇಂದು ಪ್ರಧಾನಿ ನರೇಂದ್ರ ಮೋದಿ ದೇಶವನ್ನುದ್ದೇಶಿಸಿ ಮಾತನಾಡಿದರು.

ವಿಡಿಯೊ ಸಂದೇಶ ಹಂಚಿಕೊಂಡಿರುವ ಅವರು, ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಚಿಂತನೆ ಆಧುನಿಕ ಭಾರತವನ್ನು ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅವರು, ಒಬ್ಬ ಅಸಾಮಾನ್ಯ ದೇಶ ಭಕ್ತ ಮತ್ತು ದೇಶದ ಸಮಗ್ರತೆಗೆ ಬದ್ಧರಾಗಿದ್ದ ದೂರದರ್ಶಿ ನಾಯಕರಾಗಿದ್ದರು. ಒಂದು ಸಣ್ಣ ವಿಚಾರವನ್ನು ಜನಾಂದೋಲನವಾಗಿಸಲು ಮುಖರ್ಜಿ ಅವರು ಸ್ಫೂರ್ತಿಯಾಗಿದ್ದಾರೆ ಎಂದು ತಿಳಿಸಿದರು.

---

ನವದೆಹಲಿಯಲ್ಲಿ ಇಂದು ನಡೆದ ಸಮಾರಂಭದಲ್ಲಿ ಮಂಗೋಲಿಯಾ, ಮೊಜಾಂಬಿಕ್, ನಿಕರಾಗುವ, ಸುರಿನಾಮ್, ಗೆಬೊನಿಸ್ ರಿಪಬ್ಲಿಕ್ ಮತ್ತು ಬಹಮಾಸ್ ರಾಷ್ಟ್ರಗಳ ನೂತನ ರಾಯಭಾರಿಗಳು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಮ್ಮ ರಾಜತಾಂತ್ರಿಕ ಮಾನ್ಯತಾ ಪತ್ರಗಳನ್ನು ಸಲ್ಲಿಸಿದರು.

---

ದೇಶದ ಸಹಕಾರ ಚಳವಳಿಯನ್ನು ಬಲಪಡಿಸುವ ಉದ್ದೇಶದೊಂದಿಗೆ ಸ್ಥಾಪನೆಗೊಂಡ ಕೇಂದ್ರ ಸಹಕಾರ ಸಚಿವಾಲಯವು ಇಂದು ಯಶಸ್ವಿಯಾಗಿ ಐದು ವರ್ಷಗಳನ್ನು ಪೂರ್ಣಗೊಳಿಸಿದೆ.

ನವದೆಹಲಿಯಲ್ಲಿ 'ಸಹಕಾರದಿಂದ ಸಮೃದ್ಧಿ' ಎಂಬ ದೂರದೃಷ್ಟಿಯೊಂದಿಗೆ ನಡೆದ ೫ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ, ಸಚಿವಾಲಯವು ದೇಶದ ೫೦ ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು 'ಇ-ಪ್ಯಾಕ್ಸ್'ಗಳಾಗಿ ಡಿಜಿಟಲೀಕರಣಗೊಳಿಸಿದೆ. ಇದರ ಜೊತೆಗೆ ಗ್ರಾಮೀಣ ಭಾಗದ ದಾಸ್ತಾನು ಸಾಮರ್ಥ್ಯ ಹೆಚ್ಚಿಸಲು ೪೬ ಧಾನ್ಯ ಸಂಗ್ರಹಣಾ ಗೋದಾಮುಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಗಾಗಿ 'ಹಾಲು ಪೂರೈಕೆ ಪರಿಶೀಲನಾ ಡ್ಯಾಶ್‌ಬೋರ್ಡ್' ಹಾಗೂ ನಗರ ಸಹಕಾರಿ ಬ್ಯಾಂಕ್‌ಗಳಿಗಾಗಿ 'ಸಹಕಾರ್ ಸಿಬಿಎಸ್' ಮತ್ತು 'ಸಹಕಾರ್ ಸಹಯೋಗಿ' ಎಂಬ ಎರಡು ನೂತನ ಡಿಜಿಟಲ್ ವೇದಿಕೆಗಳಿಗೆ ಚಾಲನೆ ನೀಡಲಾಯಿತು.

ಡೈರಿ, ಮೀನುಗಾರಿಕೆ, ವಸತಿ ಮತ್ತು ಮಾರುಕಟ್ಟೆ ಸಹಕಾರ ಸಂಘಗಳಿಗೆ ಗ್ರಾಮೀಣ ಸಾಲ ಸೌಲಭ್ಯ ಒದಗಿಸಲು ೨೦೨೧ರ ಜುಲೈ ೬ ರಂದು ಈ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲಾಗಿದ್ದು, ಕಳೆದ ಐದು ವರ್ಷಗಳಲ್ಲಿ ಇದು ೧೫೨ಕ್ಕೂ ಹೆಚ್ಚು ಐತಿಹಾಸಿಕ ಸುಧಾರಣಾ ಉಪಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

---

ಸುಧಾರಣೆಗಳು ಡಿಜಿಟಲೀಕರಣ ಮತ್ತು ವೃತ್ತಿಪರ ನಿರ್ವಹಣೆಯ ಮೂಲಕ ದೇಶದ ಸಹಕಾರ ಚಳವಳಿ ವಿಸ್ತರಣೆಯ ಹೊಸ ಹಂತವನ್ನು ಪ್ರವೇಶಿಸುತ್ತಿವೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಕೇಂದ್ರ ಸಹಕಾರ ಸಚಿವಾಲಯದ ೫ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ವಲಯದಲ್ಲಿ ಅತ್ಯುತ್ತಮ ಸಾಧನೆ ಮಾಡುವ ೫ ಸಹಕಾರ ಸಂಘಗಳನ್ನು ಗುರುತಿಸಿ ಗೌರವಿಸಲು ಈ ವರ್ಷ ಹೊಸ ಶ್ರೇಯಾಂಕ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದರು.

ಮುಂದಿನ ಮೂರು ವರ್ಷಗಳಲ್ಲಿ ಬೀಜೋತ್ಪಾದನಾ ಕ್ಷೇತ್ರದ ರಾಷ್ಟ್ರೀಯ ಸಹಕಾರ ಸಮಿತಿಯು ದೇಶದ ಅತಿ ದೊಡ್ಡ ಸರ್ಕಾರೇತರ ಬೀಜೋತ್ಪಾದನಾ ಸಂಸ್ಥೆಯಾಗಿ ಹೊರಹೊಮ್ಮಲಿದೆ. ನುರಿತ ತಜ್ಞರನ್ನು ಸಿದ್ಧಪಡಿಸಲು ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದ್ದು, ಇದು ನೇಮಕಾತಿಯಲ್ಲಿ ಪಾರದರ್ಶಕತೆ ತಂದು ಭ್ರಷ್ಟಾಚಾರಕ್ಕೆ ತಡೆ ನೀಡಲಿದೆ ಎಂದರು.

———————————

ದೇಶದ ಸಾರಿಗೆ ಮತ್ತು ಸರಕು ಸಾಗಣೆ ವಲಯವನ್ನು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಇಂದು 'ರಾಷ್ಟ್ರೀಯ ಹೆದ್ದಾರಿಗಳ ಸರಕು ನಿರ್ವಹಣಾ ಸಂಸ್ಥೆ-ಎನ್‌ಎಚ್‌ಎಲ್‌ಎಂಎಲ್ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದರು.

———————————

ಗಡಿ ರಸ್ತೆಗಳ ಸಂಸ್ಥೆ ಬಿಆರ್‌ಒದಲ್ಲಿ ನಡೆದಿದೆ ಎನ್ನಲಾದ ನಿಧಿ ದುರುಪಯೋಗಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ-ಸಿಬಿಐ ಇಂದು ದೇಶದ ೧೧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಒಟ್ಟು ೨೮ ಸ್ಥಳಗಳಲ್ಲಿ ವ್ಯಾಪಕ ಶೋಧ ಕಾರ್ಯ ನಡೆಸಿದೆ.

ಲಡಾಖ್‌ನಲ್ಲಿರುವ ಬಿಆರ್‌ಒನ 'ಪ್ರಾಜೆಕ್ಟ್ ವಿಜಯಕ್' ಮತ್ತು 'ಪ್ರಾಜೆಕ್ಟ್ ಯೋಜಕ್' ಯೋಜನೆಗಳಲ್ಲಿ ನಡೆದಿರುವ ಆರ್ಥಿಕ ಅಕ್ರಮಗಳ ತನಿಖೆಯ ಭಾಗವಾಗಿ ಜಮ್ಮು ಮತ್ತು ಕಾಶ್ಮೀರ, ಲಡಾಖ್, ದೆಹಲಿ, ಹರಿಯಾಣ, ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ, ಮಹಾರಾಷ್ಟ್ರ, ಅಸ್ಸಾಂ,

ಅರುಣಾಚಲ ಪ್ರದೇಶ ಹಾಗೂ ನಾಗಾಲ್ಯಾಂಡ್‌ಗಳಲ್ಲಿ ಈ ದಾಳಿಗಳನ್ನು ನಡೆಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತಾತ್ಕಾಲಿಕ ಕಾರ್ಮಿಕರ ನಿಯೋಜನೆ ಹಾಗೂ ನಕಲಿ ಕಾರ್ಮಿಕರ ಹೆಸರಿನಲ್ಲಿ ಹಣ ಬಿಡುಗಡೆ ಮಾಡಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಆರೋಪದ ಮೇಲೆ ರಕ್ಷಣಾ ಸಚಿವಾಲಯ ನೀಡಿದ ದೂರುಗಳ ಆಧಾರದ ಮೇಲೆ ಸಿಬಿಐ ಒಟ್ಟು ನಾಲ್ಕು ಎಫ್‌ಐಆರ್‌ಗಳನ್ನು ದಾಖಲಿಸಿಕೊಂಡಿದೆ.

ಬಿಆರ್‌ಒನ ತಾಂತ್ರಿಕ ಅಧಿಕಾರಿಗಳ ಮಂಡಳಿಯು ನಡೆಸಿದ ಆಂತರಿಕ ವಿಚಾರಣೆಯಲ್ಲಿ ಆರ್ಥಿಕ ಅವ್ಯವಹಾರ ನಡೆದಿರುವುದಕ್ಕೆ ಮೇಲ್ನೋಟಕ್ಕೆ ಪುರಾವೆಗಳು ಸಿಕ್ಕ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

---

ಭುವನೇಶ್ವರದ ಪುರಿಯ ಮುಂಬರುವ ಭಗವಾನ್ ಜಗನ್ನಾಥ ರಥಯಾತ್ರೆಯ ಅಂಗವಾಗಿ ಭಕ್ತರಿಗೆ ಸುಗಮ ಹಾಗೂ ಸುರಕ್ಷಿತ ಪ್ರಯಾಣದ ವ್ಯವಸ್ಥೆಗೆ ೩೦೦ಕ್ಕೂ ಹೆಚ್ಚು ವಿಶೇಷ ರೈಲುಗಳನ್ನು ಸಂಚರಿಸಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವು ಈಗಾಗಲೇ ಸಂಚರಿಸುತ್ತಿರುವ ೮೦೦ಕ್ಕೂ ಹೆಚ್ಚು ನಿಯಮಿತ ರೈಲುಗಳ ಹೊರತಾಗಿ, ಹೆಚ್ಚುವರಿ ವಿಶೇಷ ರೈಲುಗಳಾಗಿವೆ. ರಥಯಾತ್ರೆಗೆ ಸಂಬಂಧಿಸಿದ ರೈಲ್ವೆ ಸಿದ್ಧತೆಗಳ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಿದರು.

---

ದೇಶದಲ್ಲಿ ಉದ್ಯಮ ನಿರ್ವಹಣೆಯನ್ನು ಮತ್ತಷ್ಟು ಸುಲಭಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ 'ಕಾನೂನು ಮಾಪನಶಾಸ್ತ್ರ ಸಾಮಾನ್ಯ ನಿಯಮಗಳು, ೨೦೧೧ಕ್ಕೆ ಮಹತ್ವದ ತಿದ್ದುಪಡಿ ತಂದಿದೆ.

ಇದರ ಅನ್ವಯ, ಹೆಚ್ಚಿನ ಸಾಮರ್ಥ್ಯದ ತೂಕದ ಯಂತ್ರಗಳ ಮರುಪರಿಶೀಲನೆಗಾಗಿ ಬಳಸಲಾಗುತ್ತಿದ್ದ ಕಡ್ಡಾಯ ಪ್ರಮಾಣಿತ ತೂಕಗಳ ಅಗತ್ಯತೆಯನ್ನು ಗಣನೀಯವಾಗಿ ಕಡಿತಗೊಳಿಸಲಾಗಿದೆ.

---

ಅರ್ಲಿಂಗ್ಟನ್‌ನಲ್ಲಿ ಇಂದು ನಡೆಯಲಿರುವ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ೧೬ರ ಸುತ್ತಿನ ಪಂದ್ಯದಲ್ಲಿ ಪೋರ್ಚುಗಲ್ ಮತ್ತು ಸ್ಪೇನ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಮಧ್ಯ ರಾತ್ರಿ ೧೨.೩೦ಕ್ಕೆ ಆರಂಭವಾಗಲಿದೆ.

ಸಿಯಾಟಲ್‌ನಲ್ಲಿ ಭಾರತೀಯ ಕಾಲಮಾನ ನಾಳೆ ಬೆಳಗ್ಗೆ ೫.೩೦ಕ್ಕೆ ನಡೆಯಲಿರುವ ೧೬ರ ಸುತ್ತಿನ ಪಂದ್ಯದಲ್ಲಿ ಅಮೆರಿಕಾ ಮತ್ತು ಬೆಲ್ಜಿಯಂ ತಂಡಗಳು ಸೆಣಸಲಿದೆ.

ಇಂದು ಬೆಳಗ್ಗೆ ನಡೆದ ಪಂದ್ಯಗಳಲ್ಲಿ ಇಂಗ್ಲೆಂಡ್ ಮತ್ತು ನಾರ್ವೆ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿದವು.

---

ನವದೆಹಲಿಯ ಕೆಂಪುಕೋಟೆ ಸಮೀಪ ನಡೆದಿದ್ದು, ಕಾರು ಬಾಬ್ ಸ್ಫೋಟ ಪ್ರಕರಣದ ೯ ಮಂದಿ ಆರೋಪಿಗಳ ನ್ಯಾಯಾಂಗ ಬಂಧನವನ್ನು ವಿಶೇಷ ಎನ್‌ಐಎ ನ್ಯಾಯಾಲಯ ಇದೇ ೧೩ರವರೆಗೆ ವಿಸ್ತರಿಸಿದೆ.

ಅಂದು ಪಟಿಯಾಲ ಹೌಸ್ ನ್ಯಾಯಾಲಯ ಸಂಕೀರ್ಣದ ವಿಶೇಷ ಪೀಠ ಮೃತರ ದೇಹದ ಭಾಗಗಳ ಕುರಿತಾದ ವಿಧಿ-ವಿಜ್ಞಾನವನ್ನು ಪರಿಶೀಲಿಸಲಿದ್ದು, ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿಯನ್ನು ಪರಿಗಣಿಸಲಿದೆ.

೨೦೨೫ರ ನವೆಂಬರ್ ೧೦ ರಂದು ನಡೆದಿದ್ದ ಈ ಭೀಕರ ಸ್ಫೋಟದಲ್ಲಿ ೧೧ ಜನರು ಮೃತಪಟ್ಟಿದ್ದರು.

__________ ಮುಕ್ತಾಯ ___________